# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ 21/05/2022 ರಂದು ನಡೆದ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ವಾರ್ಡ್ 77 ದತ್ತಾತ್ರೇಯ ದೇವಸ್ಥಾನದ ಸಭೆಯ ನಡವಳಗಳು

ಸಭೆಯನ್ನು ಪ್ರಾರಂಭಿಸುತ್ತಾ ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರಿಗೆ ನೋಡಲ್ ಅಧಿಕಾರಿಗಳು ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು. ಈ ಕೆಳಕಂಡಂತೆ ಚರ್ಚಿಸಿ ನಿರ್ಣಯಿಸಲಾಯಿತು.

1. ಹಾಜರಿದ ಅಧಿಕಾರಿಗಳು:
   - ಜ್ಯೂನಿಯರ್ ಹೆಲ್ತ್ ಇನ್ಸ್‌ಪೆಕ್ಟರ್
   - ಬಿ. ಡಬ್ಲ್ಯೂ.ಎಸ್.ಎಸ್.ಬಿ ಇನ್ಸ್‌ಪೆಕ್ಟರ್
   - ಸಿನಿಯರ್ ಹೆಲ್ತ್ ಇನ್ಸ್‌ಪೆಕ್ಟರ್
   - ರೆವೆನ್ಯೂ ಅಧಿಕಾರಿಗಳು
   - ಎಸ್.ಡ್ಯೂ.ಡಿ ಅಧಿಕಾರಿಗಳು
   - ಬೆಸ್ಕಂ ಅಧಿಕಾರಿಗಳು

2. ಹಿಂದಿನ ಸಭೆಯ ನಡುವಳಿಯನ್ನು ಸಭೆಯಲ್ಲಿ ಚರ್ಚಿಸಿದಂತೆ ಸೂಕ್ತ ಕ್ರಮವಹಿಸಲು ಸಭೆಗೆ ನೋಡಲ್ ಅಧಿಕಾರಿಗಳು ಸಂಬಂಧಪಟ್ಟವರಿಗೆ ತಿಳಿಸಿದರು.

3. ವಿದ್ಯುತ್ ದೀಪ ನಿರ್ವಹಣೆ ಮತ್ತು ಪೋಲೀಸ್ ಇಲಾಖೆಗೆ ಸಂಬಂಧ ಪಟ್ಟ ಅಧಿಕಾರಿಗಳು ಹಾಜರಿರುವುದಿಲ್ಲ.

4. ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ವಾರ್ಡ್‌ಗೆ ಸಂಬಂಧಿಸಿದಂತೆ ವಾರ್ಡ್‌ನಲ್ಲಿ ನಡೆಯುತ್ತಿರುವ ಕಾರ್ಯ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.

5. ಕಳೆದ 6 ತಿಂಗಳಿಂದ ಅಂಗನವಾಡಿಯ ಸಮಸ್ಯೆ ಇದೆ ಕೂಡಲೇ ಅಂಗನವಾಡಿಗೆ ಚಾವಣಿ ಮತ್ತು ವಿದ್ಯುತ್ ದೀಪ ಅಳವಡಿಸಬೇಕೆಂದು ವಾರ್ಡ್ ಸದಸ್ಯರು ಸಭೆಗೆ ಕೋರಿದರು. ವಾರ್ಡ್ ಇಂಜಿನಿರ್‌ರವರು ಕೂಡಲೇ ಸರಿಪಡಿಸಲಾಗುವುದು ಎಂದು ತಿಳಿಸಿದರು.

6. ರಾಜಶಂಕರ ಮೈದನದಲ್ಲಿ ಬೆಳೆದಂಹತ ಮರಗಳಲ್ಲಿ ಸಣ್ಣ ಸಣ್ಣ ಕೊಂಬೆಗಳನ್ನು ಅರಣ್ಯ ಇಲಾಖೆಯಿಂದ ಸವರಿಸಿ ಕೊಡಬೇಕೆಂದು ಸಭೆಗೆ ಕೋರಿದರು, ಕೂಡಲೆ ಸಂಬಂಧಪಟ್ಟವರಿಗೆ ತೆರವುಗೊಳಸಲು ಸೂಚಿಸಿದರು.

7. ವಾರ್ಡ್ ನಲ್ಲಿ ಪಾಟ್ ಹೋಲ್ಸ್‌ಗಳು ಸರಿಯಾಗಿ ತುಂಬುತ್ತಿಲ್ಲ ಎಂದು ಸಭೆಗೆ ತಿಳಿಸಿದ ಹಿನ್ನೆಲೆ ಯಲ್ಲಿ ನೋಡಲ್ ಅಧಿಕಾರಿಗಳು ಕಾರ್ಯರ್ದಶೀಗಳಗೆ ಸರಿಯಾಗಿ ಸೂಕ್ತ ಗುತ್ತಿಗೆದಾರರಿಗೆ ತಿಳಿಸಿ ಸರಿಯಗಿ ಮುಚ್ಚುವಂತೆ ತಿಳೀಸಿದರು.

8. ಸಂಪಿಗೆ ರಸ್ತೆ ಎಸ್. ಬಿ. ಐ ಬ್ಯಾಂಕ್ ಹತ್ತಿರ ರಿಲಯನ್ಸ ಪೋಲ್ ಹಾಕಿರುತ್ತಾರೆ ಸಂಬಂಧಪಟ್ಟವರಿಂದ ಕೂಡಲೆ ತೆರವುಗೊಳಸಬೇಕೆಂದು ಕೋರಿದರು.

9. ಒಂಡಿ ಮನೆ ಸಂಬಂಧಿಸಿದಂತೆ ಈ ಕೆಳಕಂಡ ಫಲಾನುಬವಿಗಳನ್ನು ಸಭೆಯಲ್ಲಿ ಆಯ್ಕೆ ಮಾಡಲಾಯಿತ್ತು.

- ಜಿ. ಪ್ರಕಾಶ್ s/o ಸಿ. ಗೋವಿಂದಯ್ಯ ಲೇಟ್
  ಮನೆ ನಂ. 93, 4ನೇ ಕ್ರಾಸ್
  ವಿವೇಕಾನಂದ ಬ್ಲಾಕ್ ಪಿ. ಜಿ. ಹಳ್ಳಿ ಬೆಂಗಳೂರು-03.
- ಜಿ. ರಂಗನಾಥ s/o ಸಿ. ಗೋವಿಂದಯ್ಯ ಲೇಟ್
  ಮನೆ ನಂ. 91, ವಿವೇಕಾನಂದ ಬ್ಲಾಕ್
  4ನೇ ಕ್ರಾಸ್, ಪಿ.ಜಿ ಹಳ್ಳಿ, ಬೆಂಗಳೂರು-03.
- ಜಿ. ಆನಂದರಾಜು s/o ಸಿ. ಗೋವಿಂದಯ್ಯ ಲೇಟ್
  ಮನೆ ನಂ. 92, ವಿವೇಕಾನಂದ ಬ್ಲಾಕ್
  4ನೇ ಕ್ರಾಸ್, ಪಿ.ಜಿ ಹಳ್ಳಿ, ಬೆಂಗಳೂರು-03.

10. ವಾರ್ಡ್ ಸಭೆಗೆ ಅಧಿಕಾರಿಗಳು ಮತ್ತು ಪೋಲಿಸ್ ಸಿಬ್ಬಂದಿಗಳು ಸರಿಯಾಗಿ ಹಾಜರಾಗುತ್ತಿಲ್ಲ ಆದ್ದರಿಂದ ಸಾರ್ವಜನಿಕರ ಕುಂದು-ಕೊರತೆಗಳು ಸರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲವೆಂದು ವಾರ್ಡ್ ಸದಸ್ಯರು ನೋಡಲ್ ಅಧಿಕಾರಿಗೆ ತಿಳಿಸಿದರು. ನೋಡಲ್ ಅಧಿಕಾರಿಗಳು ಮತಾನಾಡುತ್ತ ಮುಂದಿನ ಸಭೆಗಳಗೆ ಕಡ್ಡಾಯವಾಗಿ ಹಾಜರಿರುವಂತೆ ಮುಂಚಿತವಾಗಿಯೇ ಸಭೆಯ ಸೂಚನಾ ಪತ್ರವನ್ನು ಸಂಬಂಧಪಟ್ಟವರಿಗೆ ನೀಡಬೇಕೆಂದು ವಾರ್ಡ್ ಇಂಜಿನಿಯರ್‌ಗಳಗೆ ಸೂಚಿಸಿದರು.

**ನೋಡಲ್ ಅಧಿಕಾರಿಗಳು**
**ವಾರ್ಡ್ ಸಂ.77,**
**ದತ್ತಾತ್ರೇಯ ದೇವಸ್ಥಾನ ವಾರ್ಡ್**

<u>ಪ್ರತಿಯನ್ನು:-</u>

1. ವಿಶೇಷ ಆಯುಕ್ತರು (ಆಡಳತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಪಶ್ಚಿಮ) ರವರ ಮಾಹಿತಿಗಾಗಿ ಸಲ್ಲಿಸಿದೆ.